<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

ಸಿ.ಸಿ.899/2018

<u>ಸಾಕ್ಷಿದಾರರ ಹೇಳಿಕೆಃ</u>

| | | | | |
|---|---|---|---|---|
| ಹೆಸರು | : | ಸಿದ್ದೇಶ್ | CW: 5 | PW: 3 |
| ತಂದೆಯ ಹೆಸರು | : | ಬಸಪ್ಪ | | |
| ವಯಸ್ಸು | : | 35 | | |
| ವೃತ್ತಿ | : | ಕೂಲಿ | | |
| ವಾಸಸ್ಥಳ | : | ಬಸವನಹಳ್ಳಿ | | |

ದಿನಾಂಕಃ 10.06.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

<u>ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–</u>

1 ಮತ್ತು 2 ನೇ ಆರೋಪಿತರು ನನ್ನ ಸಹೋದರರು. 3 ಮತ್ತು 4 ನೇ ಆರೋಪಿತರು ನನ್ನ ತಂದೆ ಮತ್ತು ತಾಯಿ. ಚಾಸಾ 1 ಮತ್ತು 4 ನನ್ನ ಸಹೋದರರು. ಚಾಸಾ 6 ಮತ್ತು 7 ರವರು ಗೊತ್ತು.

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೊಪಿಗಳು ನನಗಾಗಲೀ, ಚಾಸಾ 1 ಮತ್ತು 4 ರವರಿಗಾಗಲೀ ಹೊಡೆದಿಲ್ಲ, ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ. ಹಲ್ಲೆಯ ಸಂಬಂಧ ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಹಾಗೂ ಈ ಪ್ರಕರಣದ ಸಂಬಂಧ ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–</u>

ದಿಃ 23.06.2018 ರಂದು ರಾತ್ರಿ 10 ರ ಸಮಯದಲ್ಲಿ ನಾನು ಚಾಸಾ 1 ಮತ್ತು 4 ರವರು ನಮ್ಮ ಊರಿನ ಮನೆಗೆ ಹೋಗಿ ನಮ್ಮ ಜಮೀನಿನಲ್ಲಿ ಬೀಜ ಬಿತ್ತಿದ್ದನ್ನು ಏಕೆ ನಾಶಮಾಡಿರುತ್ತೀರಿ ಎಂದು

ಕೇಳಲು ಹೋದಾಗ 1 ಮತ್ತು 4 ನೇ ಆರೋಪಿತರು ಜಮೀನು ನಮ್ಮದು ನಿಮಗೆ ಯಾವುದೇ ಜಮೀನು ಕೊಡುವುದಿಲ್ಲ ಎಂದು ಜಗಳ ತೆಗೇದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯು ಏಕಾಏಕಿ ಕಬ್ಬಿಣದ ಪೈಪಿನಿಂದ ಚಾಸಾ 1 ರವರ ತಲೆಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿಗಳು ಅವರ ಕೈಕಾಲುಗಳಿಂದ ಚಾಸಾ 1 ರವರ ತಲೆಗೆ ಮತ್ತು ಕುತ್ತಿಗೆಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಹೋದ ನನಗೆ 1 ರಿಂದ 3 ನೇ ಆರೋಪಿತರು ಅವರ ಕೈಕಾಲುಗಳಿಂದ ನನ್ನ ಎಡಭುಜಕ್ಕೆ ಹಾಗೂ ಚಾಸಾ 4 ರವರ ಕುತ್ತಿಗೆಗೆ ಮತ್ತು ಎದೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 6 ಮತ್ತು 7 ರವರ ಜಗಳ ಬಿಡಿಸಿರುತ್ತಾರೆ ಎಂದರ ಸರಿಯಲ್ಲ. ಆರೋಪಿಗಳೆಲ್ಲರೂ ನನಗೂ, ಚಾಸಾ 1 ಮತ್ತು 4 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಹಲ್ಲೆಯ ಸಂಬಂಧ ನಾನು, ಚಾಸಾ 1 ಮತ್ತು 4 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೊಕೊಂಡಿರುತ್ತೇವೆ ಎಂದರ ಸರಿಯಲ್ಲ.

ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು 1 ನೇ ಆರೋಪಿಯು ಹಲ್ಲೆಯ ಸಮಯದಲ್ಲಿ ಉಪಯೋಗಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಪ್ರಕರಣದ ಸಂಬಂಧ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ 7 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.